# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಗರುಡ ಗರ್ವಭಂಗ


ಕವಿ

## ಹಿರಿಯ ಬಲಿಪ ನಾರಾಯಣ ಭಾಗವತ



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಶ್ರೀಮದ್ಭಾಗವತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪದವೀಧರ ಯಕ್ಷಗಾನ ಸಮಿತಿ ಮುಂಬಯಿ ಪ್ರಕಟಿತ ಸಂಪುಟ - ೪

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೬೪

**ಪಾತ್ರಗಳು:**

ಶ್ರೀಕೃಷ್ಣ, ಬಲರಾಮ, ಯಾದವರು, ಗರುಡ, ಹನುಮಂತ, ನಾರದ, ಶ್ರೀರಾಮ, ಸತ್ಯಭಾಮೆ, ರುಕ್ಮಿಣಿ, ಸೀತೆ, ವನಪಾಲಕರು

**ಕಥಾಸಾರಾಂಶ:**

ತನಗೆ ಸರಿಸಾಟಿಯಾದ ವೀರರಿಲ್ಲ ಎಂಬ ಗರ್ವದಿಂದ ಬಲರಾಮನೂ, ಹರಿಯನ್ನೇ ಹೊತ್ತು ಜಗವ ಸಂಚರಿಸುವವನು ತಾನು ಎಂಬ ಗರ್ವದಿಂದ ಗರುಡನೂ, ಮೂರು ಲೋಕದಿ ತನ್ನ ಸೌಂದರ್ಯವನ್ನು ಮೀರಿಸುವವರಾರಿಲ್ಲ ಎಂದು ಮೆರೆಯುತ್ತಿರುವ ಸತ್ಯಭಾಮೆಯ ಅಹಂಕಾರವನ್ನು ಮುರಿಯಬೇಕೆಂದು ಶ್ರೀಕೃಷ್ಣನು ನಾರದನ ಸಹಾಯವನ್ನು ಪಡೆಯುತ್ತಾನೆ. ದ್ವಾಪರಯುಗದಲ್ಲಿ ತನ್ನ ದರ್ಶನ ನೀಡುತ್ತೇನೆ ಎಂದು ರಾಮ ಹನುಮನಿಗೆ ಅಭಯವಿತ್ತ ಕಾರಣ ಕೃಷ್ಣಾವತಾರದಲ್ಲಿ ಈ ಪ್ರಕರಣ. ನಾರದನ ಅಣತಿಯಂತೆ ಹನುಮನು ಬಲರಾಮನ ಉದ್ಯಾನವನ್ನು ಧ್ವಂಸಗೊಳಿಸಿದಾಗ ಬಲರಾಮನು ಹನುಮನನ್ನು ಸೆರೆಹಿಡಿಯಲು ಪ್ರಯತ್ನಿಸಿ ವಿಫಲನಾಗುತ್ತಾನೆ. ಆಗ ಅವನ ತಾನೇ ಬಲಾಢ್ಯನೆಂಬ ಗರ್ವಭಂಗವಾಗುತ್ತದೆ. ನಂತರ ಹರಿಯ ಆಜ್ಞೆಯಂತೆ ಹನುಮನನ್ನು ಬಂಧಿಸಿ ಕರೆತರಲು ಹೋದ ಗರುಡನನ್ನೂ ಕೂಡ ಹನುಮ ಸದೆಬಡಿದು ಕಳಿಸುತ್ತಾನೆ. ಹನುಮನು ಹರಿಯ ಪರಮಭಕ್ತನೆಂದು ತಿಳಿದ ಗರುಡನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ನಂತರ ನಾರದರ ಮಾತಿನಂತೆ ಗರುಡನು ಹನುಮನನ್ನು ದ್ವಾರಕೆಗೆ ಕರೆತರುತ್ತಾನೆ. ಅಲ್ಲಿ ಕೃಷ್ಣನ ಪಕ್ಕದಲ್ಲಿ ತಾನು ಸೀತೆಗಿಂತ ಯಾವುದರಲ್ಲಿ ಕಡಿಮೆ ಎಂದು ಜಂಭದಿಂದ ಕುಳಿತ ಸತ್ಯಭಾಮೆಗೆ ನಾರದರು ಲಕ್ಷ್ಮಿಯ ಅವತಾರ ರುಕ್ಮಿಣಿಯೆಂದೂ, ಸತ್ಯಭಾಮೆಯು ಗಂಧರ್ವಕನ್ಯೆಯೆಂಬ ಪೂರ್ವವೃತ್ತಾಂತವನ್ನು ಅರುಹಿದಾಗ ಆಕೆಯ ಗರ್ವವೂ ಇಂಗುತ್ತದೆ. ನಂತರ ಪವನಜನಿಗೆ ಶ್ರೀಕೃಷ್ಣನು ಸೀತಾಸಹಿತ ಶ್ರೀರಾಮಚಂದ್ರನಾಗಿ ದರ್ಶನ ನೀಡುವ ಸುಂದರ ಪ್ರಸಂಗ.

**ಕವಿ ಪರಿಚಯ : (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಮತ್ತು ಅಂತರ್ಜಾಲ)**

ಕಾಸರಗೋಡು ತಾಲೂಕಿನ ಪಡ್ರೆ ಗ್ರಾಮದಲ್ಲಿ ಕರ್ಹಾಡ ಬ್ರಾಹ್ಮಣ ಕುಲದಲ್ಲಿ ೧೮೮೯ರ ವಿರೋಧಿ ಸಂವತ್ಸರದಲ್ಲಿ ಜನಿಸಿದ ಬಲಿಪ ನಾರಾಯಣ ಭಾಗವತರು ಆಧುನಿಕ ಶಾಲಾ ವಿದ್ಯಾಭ್ಯಾಸವಿಲ್ಲದೆಯೂ ಕನ್ನಡ ಭಾಷಾ ಸಾಹಿತ್ಯದಲ್ಲಿ, ಛಂದಸ್ಸಿನಲ್ಲಿ ಮತ್ತು ಸಂಗೀತದಲ್ಲಿ ಅಪಾರ ವಿದ್ವತ್ತನ್ನು ಗಳಿಸಿಕೊಂಡ, ಅತ್ಯಂತ ಪ್ರಭಾವಿ ಭಾಗವತರಾಗಿ ಇಪ್ಪತ್ತನೆ ಶತಮಾನದ ಪೂರ್ವಾರ್ಧದಲ್ಲಿ ಯಕ್ಷಗಾನ ರಂಗವನ್ನು ಆಳಿದವರು. ಪಾಟಾಳಿ ಶಂಕರಭಾಗವತರು (ಬಣ್ಣದ ಗಾಂಧಿ ಮಾಲಿಂಗ ಅವರ ಅಜ್ಜ) ಮತ್ತು ಕೂಡ್ಲು ಸುಬ್ರಾಯ ಶ್ಯಾನುಭಾಗ ಭಾಗವತರಿಂದ ಕ್ರಮವತ್ತಾಗಿ ಯಕ್ಷಗಾನ ಸಂಗೀತವನ್ನು ಅಭ್ಯಾಸ ಮಾಡಿದ ಬಲಿಪ ಭಾಗವತರು ೧೯೬೬ (ನವೆಂಬರ್) ರಲ್ಲಿ ನಿಧನರಾಗುವವರೆಗೆ ತೆಂಕು ತಿಟ್ಟಿನ ಯಕ್ಷಗಾನ ಹಾಡುಗಾರಿಕೆಗೆ ಮಾದರಿಯಾಗಿದ್ದವರು. ಅವರು ಯಕ್ಷಗಾನದ ಪರಿಪೂರ್ಣ

ಕಲಾವಿದರಾಗಿದ್ದರು. ಅಂದರೆ ಪ್ರಸಂಗ – ಹಾಡುಗಾರಿಕೆಗಳ ಮೇಲೆ ಮಾತ್ರವಲ್ಲ ಮದ್ದಳೆ ವಾದನ, ಚೆಂಡೆವಾದನ, ಹೆಜ್ಜೆಗಾರಿಕೆ ಮತ್ತು ಸಮಸ್ತ ರಂಗ ಪರಂಪರೆಗಳ ಬಗೆಗೆ ಅಧಿಕೃತವಾಗಿ ಹೇಳಬಲ್ಲವರಾಗಿದ್ದರು. ಅವರಿದ್ದ ಆಟದಲ್ಲಾಗಲಿ, ಕೂಟದಲ್ಲಾಗಲಿ ಕ್ರಮಗೇಡು ಉಂಟಾಗಲಾರದೆಂಬ ಖಾತಿ ಅವರದಾಗಿತ್ತು. ಅವರು ಯಕ್ಷಗಾನ ರಂಗದ ಮಟ್ಟಿಗೆ ಬಲಿಪ (ತುಳುವಿನಲ್ಲಿ ಹುಲಿ) ರೇ ಆಗಿದ್ದರು. ಅವರು ಆಶುಕವಿಯಾಗಿದ್ದರು. ಸೂಕ್ಷ್ಮಗ್ರಾಹಿ ವೇಷಧಾರಿಗೆ ಹೆಚ್ಚಿನ ಅಭಿನಯದ ಅವಕಾಶ ಮಾಡಿಕೊಡಲು ಅಲ್ಲೇ ಸುಂದರವಾದ ಪದವನ್ನು ಹಾಡುತ್ತಲೇ ರಚಿಸಿಕೊಡುತ್ತಿದ್ದರು. ಹಾಡುಗಾರಿಕೆಯಲ್ಲಿ ಬಹುವಾದ ಪ್ರಯೋಗಶೀಲತೆಯನ್ನು ಮೆರೆದ ಪ್ರಸಂಗಕರ್ತ ಅವರು.

ಬಲಿಪ ಭಾಗವತರ ಕೃತಿಗಳ ಕುರಿತು ಶ್ರೀ ಮಂಜೇಶ್ವರ ಗೋವಿಂದ ಪೈಯವರು ಹೇಳಿದ ಮಾತು ಇದು- ಶ್ರೀ ಬಲಿಪ ನಾಯಾಯಣ ಭಾಗವತರೆಂದರೆ ಕಳೆದ ಎಷ್ಟೋ ವರ್ಷಗಳಿಂದ ತಮ್ಮ ಜಾಗಟೆಯ ಬಾಜನೆಗೆ ಎಷ್ಟೋ ಯಕ್ಷಗಾನ ಪ್ರಸಂಗಗಳನ್ನು ಹಾಡಿ ಆಡಿಸಿರುವ ವಯೋವೃದ್ಧರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಕಲೆಯಲ್ಲಿ ಅವರೆಂದರೆ ಎತ್ತಿದ ಕೈ. ಈ ಜಿಲ್ಲೆಯಲ್ಲಿ ಅವರನ್ನು ಕಂಡಿಲ್ಲದ, ಕೇಳಿಲ್ಲದ ಯಕ್ಷಗಾನ ಪ್ರೇಮಿಗಳು ಇರುವರಾದರೆ ತೀರ ಕಡಿಮೆ. ಅವರ ಹೆಸರನ್ನು ಅರಿಯದವರೆಂದರೆ ಪ್ರಾಯಶಃ ನಾಸ್ತಿ ಎನ್ನಬಹುದು. ಹೀಗಾಗಿ ಈ ಪ್ರಸಂಗಗಳು ಅಂಥವರೊಬ್ಬ ಯಕ್ಷಗಾನ ವಿಶಾರದರ ಕೃತಿಗಳೆಂಬುದರಿಂದ ಅವು ಉತ್ತಮವಾಗಿರಲೇಬೇಕು (ಯಕ್ಷಗಾನ ಕಲಾತಪಸ್ವಿ ಸಂಸ್ಮರಣ ಗ್ರಂಥ).

ಬಲಿಪರ ರಚನೆ ಯಕ್ಷಗಾನ ಮಾರ್ಗದಂತೆ ತಿಳಿನುಡಿಯೇ. ಅವರ ರಚನೆಗಳ ಸಂಗೀತಮೌಲ್ಯ ಮೇಲ್ಮಟ್ಟದ್ದು. ಲಯದ ನಾಟ್ಯಕ್ಕೆ ಅಡಿಗಡಿಗೆ ಅನುವು ನೀಡುವ ಪದಪ್ರಯೋಗ ಅವರದು. ಭಾಷಾಶೈಲಿಯಂತು ತುಂಬ ಪರಿಷ್ಕಾರಯುತವಾದದ್ದು.

ಇವರು ಬರೆದ ಪ್ರಸಂಗಗಳು: ಅವರು ಇಪ್ಪತ್ತು ಪ್ರಸಂಗಗಳನ್ನು ಬರೆದಿದ್ದಾರೆ. ಅವುಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಎರಡು ಪ್ರಸಂಗಗಳನ್ನು – ಅಹಲ್ಯಾ ಶಾಪ ಮತ್ತು ವಾನರಾಭ್ಯುದಯ – ಇಲ್ಲಿ ಜೋಡಿಸಿದೆ. ಅವರ ಉಳಿದ ಪ್ರಸಂಗಗಳೆಂದರೆ – ಬ್ರಹ್ಮಕಪಾಲ, ಪ್ರಹ್ಲಾದ ಚರಿತ್ರೆ, ಶಶಿಪ್ರಭಾ ಪರಿಣಯ, ದೇವೀ ಮಹಾತ್ಮೆ, ಶಕುಂತಲಾ ಪರಿಣಯ, ಪದ್ಮಾವತೀ ಕಲ್ಯಾಣ, ಕಚದೇವಯಾನಿ, ಚಂದ್ರಹಾಸ, ಗದಾಪರ್ವ, ಸಮುದ್ರ ಮಥನ, ಜಲಂಧರ ಕಾಳಗ, ರುಕ್ಮಿಣೀ ಸ್ವಯಂವರ, ನರಕಾಸುರವಧೆ, ಗರುಡಗರ್ವಭಂಗ, ಕೃಷ್ಣಾರ್ಜುನಕಾಳಗ, ಉಷಾ ಪರಿಣಯ, ವೀರವರ್ಮಕಾಳಗ, ಸಿಂಹಧ್ವಜಕಾಳಗ.

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ವಾರ್ಧಕ**
ಶ್ರೀರಮಣ ಮನದಿ ಯೋಚಿಸುತೆಂದ ಗರ್ವದಿಂ |
ಮೇರೆದಪ್ಪಿದರೆಲ್ಲ ತನಗೆ ಎಣೆಯಿಲ್ಲೆನುತ |
ನಾರಿ ಭಾಮೆಯು ಕೊಬ್ಬಿಹಳು ಸಕಲ ಪಾರುಪತ್ಯವು ತನಗೆ ಮೂಲೋಕದಿ ||
ವೀರಭಟನೆನುತ ಹಲಧರನಿರ್ಪನದರ ಪರಿ |
ಹಾರವೆಸಗುವೆನೊಂದುಪಾಯದಿಂ ತಾನೆನುತ |
ನಾರದ ಮುನೀಂದ್ರನಂ ನೆನೆಯಲ್ಕೆ ನಡೆತರಲು ಸತ್ಕರಿಸುತವಗೆಂದನು || 1 || 1 ||

**ಬೇಹಾಗ್ - ಅಷ್ಟ**
ಸರಸವಾದುದು ಮುನಿವರನೆಲ್ಲ ಕಡೆಯ |
ಚರಿಸಿ ಗರ್ವಿತರ ಭಂಗಿಪ ಮಹಾಕಾರ್ಯ ||
ನಿರತ ಕೈಗೊಂಡು ಸಾಧಿಸುತಿಹ ನೀನು |
ಮರೆತೆ ಯಾತಕೆ ಯಾದವರ ಕೃತ್ಯಗಳನು || 1 ||

ಚಿನುಮಯಾತ್ಮಕ ನೀನೆ ಜನಿಸಿ ಯಾದವರ |
ದಿನ ದಿನ ತಿದ್ದುವೆ ಘನ ಕಾರ್ಯಭಾರ ||
ಎನಗೇಕೆ ನಿನ್ನಾಜ್ಞೆಯಂದದೊಳಾನು |
ದನುಜರ ವಧೆಗಪ್ಪುದನು ಕೈಗೂಡಿಪೆನು || 2 ||

ಆದರೊಂದುಂಟು ನೀ ಸಾಧಿಪುದಯ್ಯ |
ಯಾದವರೆಲ್ಲ ಕೊಬ್ಬಿಹರು ನಮ್ಮೊಡೆಯ ||
ಸಾಧುಸಜ್ಜನರನು ಮನ್ನಿಸದಿರುವ |
ಮೇದಿನಿ ಮೂರರೊಳತಿ ಬಲನೆನುವ || 3 ||

ತರುಣಿ ಭಾಮೆಯು ಕೂಡಿ ನರಕಾದಿ ಖಳರ |
ತರಿದು ನಾಕವ ಪೊಕ್ಕು ಗೆಲಿದು ನಿರ್ಜರರ ||
ಸುರ ಪಾರಿಜಾತ ತರುವ ತಂದೆನೆಂದು |
ಮೆರೆವಳು ಪರಿಹರವರುಹು ನೀನೊಂದು || 4 || 5 ||

**ಆರ್ಯ ಸವಾಯ್ - ಏಕ**
ದನುಜಾಂತಕ ಕೇಳೆನಗರಿಯದು ನೀ |
ನನುಮತಿಯೀಯಲದನು ತಾನು ||
ಅನುಗೊಳಿಸುವೆನೆನೆ ಮನದೊಳು ಯೋಚಿಸಿ |
ಮುನಿಪನಿಗೆಂದನು ಚಿನುಮಯನು || 1 || 6 ||

**ವಾರ್ಧಕ**
ಘನ ಮಹಿಮ ವಾಯುಜಗೆ ದ್ವಾಪರದೊಳೀವೆ ದರು |
ಶನವೆಂದು ಸಂತೈಸಿ ಬೀಳ್ಗೊಂಡ ಮೇಲೆ ದೃಢ |
ಮನದಿ ರಾಮಧ್ಯಾನದಿಂದ ಸೇತುವಿನ ಬಳಿ ನೆಲಸಿರ್ಪ ನೀನಾತನ ||
ವಿನಯದಿಂದೊಡಬಡಿಸಿ ತೀರ್ಥಾಚರಣೆ ಗೈಯೆ |
ವನಜನಾಭನ ಕಾಣಿಸುವೆನೆಂದು ಕರೆತರುತ |
ಅನುಪಮದ ನಮ್ಮ ಉದ್ಯಾನವನ ಕೆಡಿಸುವಂತೆಸಗೆ ಶುಭವಪ್ಪುದೆಂದ || 1 || 7 ||

**ಕಂದ**
ಆ ಮಾತಿಗೆ ನಸುನಗುತಾ |
ಕಾಮಪಿತನನುಜ್ಞೆಯಾಂತು ಪೊರಟಾಕ್ಷಣಕಂ ||
ರಾಮನ ಚರಿತೆಯ ಪಾಡುತ |
ಲಾ ಮರುತಾತ್ಮಜನ ಕಾಂಬೆನೆನುತ್ತೈತಂದಂ || 1 || 8 ||

**ಸೌರಾಷ್ಟ್ರ - ತ್ರಿವುಡೆ**
ಕರುಣನಿಧಿ ಶ್ರೀರಾಮನಾಜ್ಞೆಯ |
ಧರಿಸಿ ಮರುತಜ ಸೇತುವಿನ ಬಳಿ |
ಸ್ಮರಿಸುತಾತನ ಕುಳ್ಳಿರುತ ಮನ | ಮರುಗುತೆಂದ || 1 ||

ಮುಂದೆ ದ್ವಾಪರಯುಗದಿ ದರ್ಶನ |
ಚಂದದಿಂ ಕಾಣಿಸುವೆ ನಾ ನಿನ |
ಗೆಂದು ನಿಜಗತಿಗಯ್ದ ಬಾರದೆ | ನಿಂದನೇಕೆ || 2 ||

ಬಂದುದೀ ಯುಗಕವಧಿ ರಾಮನ |
ಒಂದೆ ಮನದಲಿ ಸ್ಮರಿಸುತಿಹೆ ನಾ |
ಬಂದು ಕಾಣಿಸನೇತಕಕಟಾ | ಎಂದಳುತಲಿ || 3 || 11 ||

**ತೋಡಿ - ಆದಿ**
ಯಾತಕೆನ್ನನು ಮರೆದೆ | ದಯಾನಿಧೆ |
ಯಾತಕೆನ್ನನು ಮರೆದೆ || ಪ ||
ಯಾತುಧಾನಕುಲ | ಘಾತ ಖ್ಯಾತ ಸುರ |
ನಾಥ ವಿನುತ ಹೇ | ಸೀತಾವಲ್ಲಭ || ಯಾತ || 1 ||

ಕೋಮಲಾಂಗ ಘನ | ಶ್ಯಾಮ ನಿರಾಮಯ |
ಕಾಮನಯ್ಯ ಶುಭ | ರಾಮ ನಾಮ ನೀ || ಯಾತ || 2 || 13 ||

**ಉದಯಚಂದ್ರಿಕ - ಅಷ್ಟ**
ಎಂದು ಕಾಂಬೆ ನಿನ್ನನೆನುತ |
ಒಂದೇ ಮನದಿ ಧ್ಯಾನಿಸುತ್ತ |
ನಿಂದಿರಲ್ಕೆ ಸುರಮುನೀಂದ್ರ |
ಬಂದ ರಾಮಸ್ಮರಣೆಯಿಂದ || 1 ||

ಪರಿಕಿಸುತ್ತ ಕರವ ಮುಗಿದು |
ಸುರಿಸೆ ಕಂಬನಿಯನು ತಿಳಿದು |
ಭರದಿ ಮೈಯ ತಡವರಿಸುತ |
ಬೆರಗಿನಿಂದ ಪೇಳ್ದನಾತ || 2 ||

ವೀರರೆರೆಯ ಹನುಮಂತ |
ಕಾರಣೀಕ ಸುಗುಣವಂತ |
ಮೂರು ಲೋಕಕಧಿಕ ನೀನು |
ಭೂರಿ ಶೋಕವಾಂತುದೇನು || 3 ||

ಪೇಳಲೇನು ಮುನಿಲಲಾಮ |
ನೀಲಮೇಘಶ್ಯಾಮ ರಾಮ |
ಪಾಲಿಸಿದ ಅಭಯ ಮರೆತ |
ಮೇಲೆ ಎನ್ನ ಬಾಳ್ವೆ ವ್ಯರ್ಥ || 4 || 17 ||

**ಕಂದ**
ಕರುಣಿಪೆ ದ್ವಾಪರದಲಿ ಮಮ |
ದರುಶನಮಂ ನಿನಗೆನುತ್ತ ನಿಜಗತಿಗೈದಿದ ||
ಪರತರಪಾವನಮೂರ್ತಿಯು |
ತೊರೆದನೆ ದಯವೆನ್ನೊಳೆಂದು ಬಳಲುವೆನೆಂದಂ || 1 || 18 ||

**ಭೂಪಾಳಿ - ಝಂಪೆ**
ಜಗದ ಜೀವನ ತನಯ | ರಘುವರನ ಸುಪ್ರೀಯ |
ಸುಗುಣ ಮರೆಯನು ನಿನ್ನ | ಖಗರಾಜಗಮನ ||
ಯುಗಯುಗದೊಳವತರಿಸಿ | ವಿಗಡ ಖಳರನ್ನೊರಸಿ |
ಬಗೆ ಬಗೆಯ ಸುಖವೀವ | ಜಗದಾದಿ ದೈವ || 1 ||

ತ್ವರಿಯದಿಂ ನೋಳ್ಪ ಮನ | ವಿರಲು ತೋರಿಸುವೆ ನಾ |
ಶರಧಿ ತಡಿಯಲ್ಲಿರಲು | ದೊರೆವನೆ ಕೃಪಾಳು ||
ತೆರಳಿ ಮೀಯುತ ತೀರ್ಥ | ಪರಮ ಪಾವನ ಕ್ಷೇತ್ರ |
ಪರಿಕಿಸಲು ಪ್ರತ್ಯಕ್ಷ | ದೊರೆವ ಜಲಜಾಕ್ಷ || 2 || 20 ||

**ಕಂದ**
ಹಿತವಿರಲೀ ಕ್ಷಣಕೆನ್ನಯ |
ಜತೆಯಿಂದ್ಯೆತರಲು ತೋರ್ಪೆನಿಂದಿನೊಳಾ ರಘು ||
ಪತಿಯಂ ದಿಟವೆನೆ ಮಾರುತ |
ಸುತನತಿ ಹಿತವೆನುತ ಪೇಳ್ದನಾ ಮುನಿವರಗಂ || 1 || 21 ||

**ಸೌರಾಷ್ಟ್ರ - ತ್ರಿವುಡೆ**
ಸರಸವಾಂತೆನು ಮುನಿಪ ರಾಮನ |
ಸ್ಮರಣೆಯಿಂ ದಿನ ಕಳೆವೆನಾತನ |
ದರುಶನವ ಕಾಣದೆಯೆ ಬಲುದಿನ | ಸರಿದುದಯ್ಯ || 1 ||

ತೀರ್ಥ ತೀರ್ಥವ ಮಿಂದು ಉತ್ತಮ |
ಕ್ಷೇತ್ರಗಳ ದರ್ಶನದಿ ಪಾವನ |
ಮೂರ್ತಿ ದೊರಕುವನಾದರೈತಹೆ | ಒತ್ತಿನಿಂದ || 2 ||

ಎಂದು ಸುರಮುನಿಯೊಡನೆ ಪೊರಟೈ |
ತಂದನುತ್ತರ ದೆಸೆಗೆ ರಘುಕುಲ |
ಚಂದ್ರಮನ ನುತಿಸುತ್ತ ಮಾರುತ | ಕಂದ ಜವದಿ || 3 ||

ಸಾರಿ ಮುಂದಕೆ ಮಿಂದನಾ ಕಾ |
ವೇರಿ ಪುಣ್ಯಾಶ್ರಮವ ಕಳೆದಾ |
ಬೇರೆ ಬೇರೆ ಕ್ಷೇತ್ರ ಪೊಕ್ಕು ಉ | ದಾರಬಲನು || 4 ||

ತುಂಗ ಭದ್ರೆಯು ಕಪಿಲೆ ನರ್ಮದೆ |
ಮಂಗಲಾಕರೆ ಶೋಣಭದ್ರೆಯು |
ಗಂಗೆ ಗೌತಮಿ ಮುಖ್ಯ ಬಲು ತೀ | ರ್ಥಂಗಳೆಲ್ಲ || 5 ||

ಭಾವಶುದ್ಧದಿ ಮಿಂದು ಉತ್ತಮ |
ದೇವತಾಮಂದಿರಗಳೀಕ್ಷಿಸಿ |
ಪಾವಮಾನಿಯು ಪರಿಕಿಸುತ ದ್ವಾ | ರಾವತಿಯನು || 6 || 27 ||

**ಕೇದಾರಗೌಳ - ಝಂಪೆ**

ಭ್ರಮೆಯಗೊಂಡನು ಮನದಲಿ | ಶತಕೋಟಿ |
ದ್ಯುಮಣಿ ಸಂಕಾಶದಲ್ಲಿ ||
ಅಮಿತ ವಿಭವದಿ ತೋರ್ಪುದು | ಪುರವ್ಯಾವು |
ದಮಮ ಶರಧಿಯೊಳಿಪ್ಪುದು || 1 ||

ಮೊದಲು ಕಂಡರಿಯೆ ತಾನು | ಪೊಸತಾಗಿ |
ತ್ರಿದಶರೆಸಗಿದರೆ ಇದನು ||
ಉದಧಿಯೊಳು ದಕ್ಷಿಣದಲಿ | ಲಂಕೆಯಿ |
ರ್ಪುದು ಆರು ತಂದರಿಲ್ಲಿ || 2 ||

ದುರುಳಕುಲ ಸದೆದು ರಾಮ | ಕರುಣಿಸಿದ |
ಶರಣಂಗೆ ದನುಜಸ್ತೋಮ ||
ಮರೆಮೋಸದಿಂದ ತಂದು | ಇಲ್ಲಿರಿಸಿ |
ದರೊ ಮನಕೆ ತಿಳಿಯದೊಂದು || 3 || 30 ||

**ಕಂದ**

ಕೇಳಿದ ವಿಸ್ಮಯದಿಂ ಮುನಿ |
ಪಾಲನೆ ಇದಿರಿಗೆ ಸುಶೋಭೆಯಿಂ ಶರಧಿಯೊಳಿರು ||
ವಾಲಯವಾರದು ಇದರಂ |
ಆಳುವ ಪ್ರಭುವಿನ ವಿಚಾರ ತಿಳುಹೆನೆ ಪೇಳ್ದಂ || 1 || 31 ||

**ಮುಖಾರಿ - ಏಕ**

ಬಿತ್ತರಿಸಲು ತೀರದಯ್ಯ | ಮಾರುತ ತನಯ |
ಉತ್ತಮವಾದ ದ್ವಾರಾವತಿಯ ||
ವಿಸ್ತಾರಂಗಳ ರತ್ನಾಲಂಕೃತ |
ಯುಕ್ತದ ಪುರವು ವಿಚಿತ್ರವಾದುದೈ || 1 ||

ಭೀಮ ವಿಕ್ರಮರು ಯಾದವರು | ಸಂಗರದಿ ಸು |
ತ್ರಾಮಾದ್ಯರಿಂದ ಬಲು ಭಟರು ||
ಭೂಮಿಪರಂ ನಿರ್ನಾಮಗೈದು ಈ |
ಸೀಮೆಯಾಳ್ವ ಬಲರಾಮನೆಂಬೋರ್ವನು || 2 || 33 ||

**ಮಾರವಿ - ಏಕ**

ಅನಿತರೊಳ್ ಮಾರುತಿ ಕನಲುತೆಂದ ಹುಲು |
ಮನುಜನ ಪೊಗಳದಿರು ||
ದನುಜಾಂತಕ ರಾಮನ ಮಿಕ್ಕಿನ ಬಲ |
ಬಿನುಗನೊಳಿಹುದೇನೈ || 1 ||

ಭರಿತನು ಸಚರಾಚರದಲಿ ಸೀತಾ |
ವರ ರಘುಕುಲತಿಲಕ ||
ಪುರಹರ ವಿಧಿ ಸುರನರಪೂಜಿತ ಕಿಂ |
ಕರರ ಪೊರೆವ ನಿರತ || 2 ||

ವೇದವಂದ್ಯ ಜಗದಾದಿಪುರುಷ ಮಧು |
ಸೂದನ ಶ್ರೀರಾಮ ||
ಮಾಧವನಿಂ ಹುಲು ಯಾದವನತಿ ಮೇ |
ಲಾದನೆ ಭೂತಳದಿ || 3 ||

ಪ್ರೇಮವಿರಲು ಬಲರಾಮನ ಕರೆ ಸಂ |
ಗ್ರಾಮ ಮುಖದೊಳವನ ||
ನಾಮದ ಬಲ ನಿರ್ನಾಮ ಗೈಯದಿರೆ |
ರಾಮನ ಕಿಂಕರನೆ || 4 || 37 ||

**ಭಾಮಿನಿ**

ಸರಿ ನುಡಿದೆ ತಪ್ಪಿಲ್ಲ ರಾಮನ |
ಚರಣ ಸೇವಕನಾಗಿ ಸ್ವಾಮಿಗೆ |
ಕೊರತೆ ಬಪ್ಪುದ ಪರಿಕಿಸುತಯಿಹುದುಚಿತವಲ್ಲದಕೆ ||
ಧುರಕೆ ನಿನಗಿದುರಾಗಿ ಶೀಘ್ರದಿ |
ಬರುವುದಕೆ ಆ ಕಡೆಗೆ ಲಂಘಿಸಿ |
ಪುರದ ಉದ್ಯಾನವನು ಭಂಗಿಪ ಕಾರ್ಯವೆಸಗೆಂದ || 1 || 38 ||

**ಭೈರವಿ - ಅಷ್ಟ**

ನಾರದನೆಂದುದನು | ಕೇಳುತ್ತಲು |
ಬ್ಬೇರಿ ಮಾರುತಸುತನು ||
ಶ್ರೀರಾಮ ಸ್ಮರಣೆಯಿಂ ದ್ವಾರಕಿಗಾಕ್ಷಣ |
ಹಾರಿದನೇನೆಂಬೆನು || 1 ||

ಉತ್ತಮ ಉದ್ಯಾನವ | ಪೊಕ್ಕಲ್ಲಿ ಬೀ |
ಸುತ್ತ ಸುತ್ತಲು ಬಾಲವ ||
ಕಿತ್ತಳೆ ಜಂಬು ಕಪಿತ್ಥ ದಾಳಿಂಬ ಸ |
ಮಸ್ತ ಕಿತ್ತನು ಮೂಲವ || 2 ||

ಹಾವಳಿ ಗೈಯೆ ಕಂಡು | ಸುತ್ತುತಲಿರ್ಪ |
ಕಾವಲ ಭಟರ ದಂಡು ||
ಠೀವಿಯಿಂದಲ್ಲಿಗೆ ಧಾವಿಸಿ ಮುತ್ತಲು |
ಪಾವಮಾನಿಯು ಬಿಡದೆ || 3 ||

ಸುತ್ತುತ ಬಾಲವನು | ಕೆಡಹಿಸುತ್ತ |
ಒತ್ತುತ ಗಂಟಲನು ||
ಅತ್ತಿತ್ತ ಕದಲದ ತೆರದಿ ಬಿಟ್ಟನು ಪ್ರಾಣ |
ಮಾತ್ರದೊಳೆಲ್ಲರನು || 4 || 42 ||

**ಕಂದ**
ಬಂಧನದಿಂ  ಪಾರಾಗದೆ |
ಒಂದೆಡೆ ಚೇತನವು ಕೆಟ್ಟು ಇರಲಾ ವಾಯುಜ ||
ಮುಂದೆ ಸರಿದು ವನ ಕೆಡಿಸುತ |
ನಿಂದಿರಲಾ ಸುರಮುನೀಂದ್ರ ಬಲನೆಡೆಗೈದಂ || 1 || 43 ||

**ಕಾಂಬೋಧಿ - ಝಂಪೆ**
ಇತ್ತ ಹಲಧರ ಸಭೆಯೊಳುತ್ಸಾಹದಿಂದಲಿ ಅ |
ಮಾತ್ಯ ಮುಖ್ಯರಿಗೆಂದ ಜಗದಿ ||
ಸತ್ವವಂತನು ತಾನೆನುತ್ತ ಸತ್ಕೀರ್ತಿಯನು |
ಪೊತ್ತಿರುವೆ ಇದಿರಿಲ್ಲವೆನಗೆ || 1 ||

ಯಾದವರು ಕುಲಹೀನರಾದವರು ಎನುವ ಅಪ |
ವಾದವನು ಕಿತ್ತೊಗೆದೆ ಮೊದಲೆ ||
ಮೇದನೀಪಾಲರೊಳು ಕಾದಾಡಿ ಗೆದ್ದ ಮೇ |
ಲಾದರದಿ ಪಾದಕೆರಗುವರು || 2 ||

ಆ ಮಹಾ ರಘುಕುಲಜ ರಾಮನೆನ್ನುವ ಪೆಸರ |
ನಾ ಮರೆಸಿದೆನು ಜಗದೊಳೆನ್ನ ||
ನಾಮ ಹೆಚ್ಚಿನದು ಬಲರಾಮನೆಂದೆನುತ ಸು |
ತ್ರಾಮ ಮುಖ್ಯರು ಪೊಗಳುತಿಹರು || 3 ||

ಆದರೇನುಸುರುವೆ ಸಹೋದರನು ಮಾನ ಮ |
ರ್ಯಾದೆಗಳ ತಿಳಿಯನನವರತ ||
ಖೇದವೊಡ್ಡುವ ಕಳವು ಹಾದರದಿ ಎನಗಾಗಿ |
ಆದರಿಪರವನ ಜಗತಿಯಲಿ || 4 || 47 ||

**ಕಂದ**
ಬಾರನು ಸಭೆಗಂ ನಿರತವು |
ನಾರಿಯರೊಡನಾಟದಿಂದ ಬಾಳುವ ರಾಜ ವಿ ||
ಚಾರದ ಕಾರ್ಯವ ತಿಳಿವನೆ |
ಚೋರಂ ಎನುವಲ್ಲಿ ಸುರಮುನಿ ಭರದೋಳ್ || 1 || 48 ||

**ಕೇದಾರಗೌಳ - ಅಷ್ಟ**
ಪರಿಕಿಸಿ ಮುನಿಪನ ಕರೆತಂದಾಸನದಿ ಕು |
ಳ್ಳಿರಿಸಿ ಪೇಳಿದ ನಗುತ ||
ನಿರತವು ಕೃಷ್ಣನ ದರುಶನ ಮಾಳ್ಪಗೇ |
ನಿರುವುದೆನ್ನಲಿ ಕಾರ್ಯವು || 1 ||

ಬಲಹೀನ ಯಾದವಕುಲವ ಉದ್ಧರಿಸಿದ |
ಬಲರಾಮನೆಂದೆನುತ ||
ಬೆಳಗಿಸಿದೆನು ಕೀರ್ತಿ ಇಳೆಯ ಪಾಲಕರೆನ್ನ |
ಬಲುಹಿಗೆ ಬೆದರುವರು || 2 ||

ನಿತ್ತಲ್ಲಿ ನಿಲದೆ ಮುಹೂರ್ತ ಮಾತ್ರದಲಿ ನೀ |
ಸುತ್ತಿ ಲೋಕಾಲೋಕವ ||
ನಿತ್ಯವು ಪರಿಕಿಪೆ ಎನ್ನ ಪೋಲುವರಾರು |
ಸತ್ವದಿ ಪೇಳ್ವುದೆಂದ || 3 || 51 ||

**ಜಂಜೂಟಿ - ಏಕ**

ಬಲುಭಟ ಯಾದವ ಬಳಗವ ಪಾಲಿಪೆ |
ಬಲವಂತನು ಖರೆ ಬಲರಾಮ ||
ಇಳೆಯೊಳು ಜನುಮವ ತಳೆದು ಮೂಲೋಕದಿ |
ಗಳಿಸಿದೆ ಕೀರ್ತಿಯ ಗುಣಧಾಮ || 1 ||

ತಿಳಿಯೆಯ ನಿನ್ನಯ ಚೆಲುವ ಉದ್ಯಾನದ |
ಫಲ ಕುಸುಮ ತರುಲತೆಯೆಲ್ಲ ||
ಹುಲು ವಾನರನಿಂದಳಿದುದು ಕಾಯ್ವರ |
ಬಲು ಭಂಗವಗೊಳಿಸಿದನಲ್ಲ || 2 ||

ಕಾಡನಲೆವ ಹುಲು ಕೋಡಗನೀ ಪರಿ |
ಕೇಡು ಗೈದು ನಲಿದಾಡುವನು ||
ರೂಢಿಯೊಳತಿ ಬಲ ನೋಡಿ ಸುಮ್ಮನಿರೆ |
ಹೇಡಿಯೆಂಬರೈ ನಿನಗಿನ್ನು || 3 ||

ಅನುಜನ ಬಳಿಗೈದನು ಕಾಣಿಸನವ |
ಅನುದಿನ ವನಿತೆಯರನು ಬೆರೆವ ||
ಘನತೆ ಊಳಿಗವನು ಗೈಯುವನು |
ವನಪಾಲನೆಯೆಂತೆನುತರಿವ || 4 || 55 ||

**ಮಾರವಿ - ಏಕ**

ಅರಿಯೆನಿದನು ವನಚರನುದ್ಯಾನದಿ |
ಚರರಂ ಸೆರೆಪಿಡಿದು ||
ಪರಿಪರಿ ಸುಮಫಲ ತರುಲತೆ ಮುರಿಯುತ |
ಲಿರುವನೆ ಕೊಬ್ಬಿನಲಿ || 1 ||

ಉರಿವಗ್ನಿಯ ಬಳಿ ಸರಿದ ಪತಂಗದ |
ತೆರವಾಯ್ತರೆ ಕ್ಷಣದಿ ||
ಸೆರೆಯ ಪಿಡಿದು ತುಂಡರಿಸುತ ಬಾಲವ |
ಮೆರೆಸುವೆ ಪಟ್ಟಣದಿ || 2 ||

ಹೇಡಿ ಕೃಷ್ಣ ಉಂಡಾಡುವನೊಳು ಮಾ |
ತಾಡಿ ಫಲಗಳಿಲ್ಲ ||
ನೋಡುವೆ ತೋರಾ ಕೋಡಗನನು ಬಲ |
ಕೂಡಿ ಬರುವೆನೆನುತ || 3 || 58 ||

**ವಾರ್ಧಕ**
ಪಟುಭಟರು ಬರಲಿ ಉದ್ಯಾನಕೆನ್ನೊಡನೆ ಮ |
ರ್ಕಟನ ಪಿಡಿತರುವ ಬಗೆಗೆನುತಾಜ್ಞೆ ಕೊಡಲು ಯದು |
ಕಟಕ ನೆರೆದುದು ಬಲನ ಅನುಮತಿಯೊಳಾಗ ಬಲು ಶಸ್ತ್ರಸನ್ನಾಹದಿಂದ ||
ನಿಟಿಲಾಕ್ಷನಂತೆ ಹಲಧರ ಪೊರೆಡೆ ಬಳಿವಿಡಿದು |
ಶಠ ನಿಶಠ ಪ್ರದ್ಯುಮ್ನ ಸಾಂಬರೊಂದಾಗಿ ದಿ |
ಕ್ತಟ ಬಿರಿವ ತೆರದಿ ವನಕೈತರಲು ಮುನಿವರಂ ತೋರ್ದು ಬಲರಾಮಗೆಂದ || 1 || 59 ||

**ಮುಖಾರಿ - ಏಕ**
ನೋಡು ನೋಡಲ್ಲಿ ನೀಚನ | ವನೇಚರನ |
ನೋಡು ನೋಡಲ್ಲಿ ನೀಚನ || ಪ ||
ಕಾಡನುಳಿದ ಹುಲು | ಖೋಡಿಯುದ್ಯಾನದಿ |
ಕೇಡು ಬಗೆದು ಮನೆ | ಮಾಡಿ ಕುಳ್ಳಿರುವನು || ನೋಡು|| 1 ||

ತೀರಿಸಿ ಚಾರರ | ಏರಿ ತರುವ ರಣ |
ಭೈರವನಂತಿಹ | ಧೀರೋದ್ಧಾರನ || ನೋಡು || 2 || 61 ||

**ವಾರ್ಧಕ**
ಕಡು ಮೋಹದಿಂ ಬಿಡದೆ ಪಾಲಿಸಿದ ಉದ್ಯಾನ |
ಪುಡಿಯಾದುದಂ ನೋಡಿ ಖತಿಗೊಂಡವಗೆ ಮುನಿಯ |
ನುಡಿಯು ಉರಿವಗ್ನಿಗಂ ಘೃತ ಸುರಿದ ತೆರಮಾಗಿ ಕರೆದು ಸುಭಟರಿಗೆಂದನು ||
ಕಡುಗಲಿಗಳೊಡಗೂಡಿ ಒಡನೆ ಬಡ ಕೋಡಗನ |
ಪೊಡವಿಗಿಳಿಸುತ ಓಡಗೊಡದೆ ತಡೆಯುತ ಬಡಿದು |
ಮಡಿಯದೋಲ್ಕೆಡುಕನಂ ಪಿಡಿದು ಹೆಡೆಮುಡಿ ಬಿಗಿದು ನಡಿರೆನಲು ಪಡೆ ನಡೆದುದು || 1 || 62 ||

**ಪಂತುವರಾಳಿ - ಮಟ್ಟೆ**
ಕೇಳಿ ಕನಲಿ ಒಂದುಗೂಡುತ | ಪೊರಟು ಕ |
ಟ್ಕಾಳು ಭಟರು ಮುಂದೆ ಸಾರುತ || ಪ ||
ಕಾಲನಾಳ್ಗಳಂತೆ ಸಕಲ | ಪಾಳಯಗಳು ಅಬ್ಬರಿಸುತ |
ಮೇಲೆನಿಪ ಉದ್ಯಾನವನವ | ಹಾಳುಗೈದು ಮರವನೇರ್ದು |
ಕೀಳು ಕಪಿಯ ಪಿಡಿದು ಭರದಲಿ | ತುಂಡರಿಸುತ |
ಬಾಲವನ್ನು ಬಡಿದು ಇಳೆಯಲಿ | ಕೆಡಹಿರೆಂದು |
ನಾಲ್ಕು ದೆಸೆಗಳಿಂದ ಶಸ್ತ್ರ ಜಾಲವನ್ನು ಸುರಿದರಾಗ |
ಪೇಳಲರಿದು ಅವರ ವಿಕ್ರಮ | ವಾಯುಸುತನ |
ಮೇಲೆ ತೋರ್ದರತಿ ಪರಾಕ್ರಮ || ಕೇಳಿ || 1 ||

ಮುಳಿದು ಸಿಂಹನಾದಗೈದು | ಕೆಲವು ಸರಳ ಮಳೆಯಗರೆಯೆ |
ಹಲವರಾಗ ಕಲ್ಲುಗುಂಡು | ಗಳಲಿ ಎಚ್ಚು ಗರ್ಜಿಸುತಿರೆ |
ತಿಳಿಯದಂತೆ ಕುಳಿತು ಮರೆಯಲಿ | ಎಸೆಯೆ ಒಂದು |
ಬಳಗ ಕಲ್ಲ ಕವಣೆಯಿಂದಲಿ | ಮರನ ಪಿಡಿದು ಅಲುಗಿಸುತ್ತ |
ಛಲದಿ ಮೆರೆದ ಬಲದ ಬಲುಹು |
ಗಳನು ಶೇಷಗರಿದು ಪೊಗಳಲು |ಏನನೆಂಬೆ |
ತಿಳುಹಲೆಂತು ಶೌರ್ಯತನಗಳು || ಕೇಳಿ || 2 ||

ಮರುತಜಾತ ತನ್ನ ಕಡೆಗೆ | ಬರುವ ಶರವನೆಲ್ಲ ಪಿಡಿದು |
ಮರಳಿ ಅವರ ಅಂಗಕೆಸೆದು | ಧರಣಿಗೊರಗಿಸುತ್ತ ಕೆಲರ |
ಮುರಿದು ವೃಕ್ಷದಿಂದ ಬಡಿದನು | ತಿರುಗಿ ಪೋಪ |
ವರನು ಬಾಲದಿಂದ ಪಿಡಿದನು ||
ಧರಣಿಗೊರಗಿಸುತ್ತ ವೀರ | ವರರ ಪುಡಿಯೊಳದ್ದಿ ಶರಧಿ |
ಗಿರಿಸಿ ಬಿಸುಟು ಮೇಲೆ ಮಳಲನು | ಸುರಿದು ಬಾಯ್ಗೆ |
ತರುವನಡರಿ ನೋಡುತಿರ್ದನು || ಕೇಳಿ || 3 || 65 ||

**ಕಂದ**

ಸ್ಮರ ಸಾತ್ಯಕಿ ಸಾಂಬಾದ್ಯರು |
ಧುರದಲಿ ಬಳಲುತಲಿ ಹಿಂದೆ ಸರಿದುದ ಕಂಡಾ ||
ಹರನಂದದಿ ಗರ್ಜಿಸಿ ಯದು |
ವರ ಮೂದಲಿಸುತಲಿ ಪೇಳ್ದ ಮರುತಜಗಾಗಳ್ || 1 || 66 ||

**ಭೈರವಿ - ಏಕ**

ಫಡ ವನಚರ ಉಪವನವ | ಪುಡಿ |
ಪುಡಿಯೆಸಗುತ ವನಕಾವ ||
ಬಡದೂತ ಕೆಡಹುತಲಿ | ನೀ |
ಮಿಡುಕದಿರೈ ಗರ್ವದಲಿ || 1 ||

ಬಲು ಹಸಿವಿಂದಲಿ ಬಳಲಿ | ಫಲ |
ಮೆಲುತಿರೆ ದೂತರು ಕನಲಿ ||
ಮುಳಿದೆನ್ನನು ಪೀಡಿಸಲು ನಾ |
ತುಳಿದೊಟ್ಟಿದೆ ಧರಣಿಯೊಳು || 2 ||

ಭೂಲೋಕದೊಳತಿ ಬಲನು | ನಾ |
ಪಾಲಿಪ ಉದ್ಯಾನವನು ||
ಹಾಳೆಸಗಿದ ಕಪಿ ನಿನ್ನ | ಬಿಡೆ |
ಶೂಲಕ್ಕೇರಿಪೆ ಮುನ್ನ || 3 ||

ಸ್ಮರಿಸುತ ರಾಮನ ಜಪವ | ಸಂ |
ಚರಿಸುತ ಮೆಲ್ಲುವೆ ಫಲವ ||
ಬರಿದೆನ್ನನು ಕೆಣುಕುತಲಿ | ನೀ |
ಹರಣ ಕಳೆವೆ ಇಂದಿನಲಿ || 4 ||

ಸಾಮಾನ್ಯನು ರಘುರಾಮ | ನಾ |
ಕಾಮಪಾಲ ಬಲರಾಮ ||
ಭೂಮಿಪರೆಲ್ಲಳುಕುವರು | ಸು |
ಮಾತ್ರಾಮಾದ್ಯರು ಪೊಗಳುವರು || 5 || 71 ||

**ಭೈರವಿ - ಅಷ್ಟ**

ರಾಮನ ಮಹಿಮೆಯನು | ಕುಗ್ಗಿಪ ಬಲ |
ರಾಮನಾದೆಯೊ ನಿನ್ನನು ||
ನಾ ಮರ್ದಿಸುವೆನು | ಬಲಾಬಲ ನೋಳ್ಪ ಸಂ |
ಗ್ರಾಮ ಮುಖದೊಳೆಂದನು || 1 ||

ತರುಚರಾಧಮನೆ ನಿನ್ನ | ಬಂಧಿಸುತ ಕ |
ತ್ತರಿಸುತ ಬಾಲ ಮುನ್ನ ||
ಪುರಬೀದಿಯೊಳು ಮೆರವಣಿಗೆಯ ಮಾಡಿಸಿ |
ಶಿರವ ತುಂಡರಿಪೆನೆಂದು || 2 ||

ಹಲದಿಂದ ತುಡುಕಿದನು | ವಾಯುಜನದ |
ಸೆಳೆದು ವಾರಿಧಿಗಿಟ್ಟನು ||
ಮುಳಿಸಿಂದ ಮುಸಲ ಕೈಗೊಳಲು ಬಾಲದಿ ಸುತ್ತಿ |
ಕೆಳಕೆ ಬಿಸುಟು ತಿವಿದ || 3 ||

ತುಳಿದ ಭರಕೆ ಕೆಡೆದು | ಪೊರಳುತೆದ್ದು |
ನಿಲಲು ಮುಷ್ಟಿಯ ಬಲಿದ ||
ಬಳಿಕವನಿಗೆ ಮೂರ್ಛೆಗೊಳಿಸಿ ಪೋಗಲು ಎದ್ದು |
ಉಳಿದೆನಿಂದಿನೊಳೆನುತ || 4 || 75 ||

**ಭಾಮಿನಿ**
ರಂಜಿಸುವ ಮೃಗರಾಜನಿಂದಲಿ |
ಕುಂಜರನು ಪಾರಾದ ತೆರದಲಿ |
ಅಂಜನಾತ್ಮಜನೊಡನೆ ಭಂಗವ ಪಟ್ಟು ಯದುವರನು ||
ಅಂಜುತಳುಕುತ ಮೆಲ್ಲ ಮೆಲ್ಲನೆ |
ಹಿಂಜರಿತು ನಡೆತರುವ ಪಥದೊಳು |
ಕಂಜನಾಭನು ಬಂದು ಮಣಿಯುತಲೆಂದನಾತಂಗೆ || 1 || 76 ||

**ಕಲ್ಯಾಣಿ - ತ್ರಿವುಡೆ**
ಎಲ್ಲಿಂದಯ್ತಂದೆಯಣ್ಣ | ಸಾಹಸಪೂರ್ಣ |
ಎಲ್ಲಿಂದಯ್ತಂದೆಯಣ್ಣ ||
ಬಲ್ಲಿದಾತನು ಜಗತಿಯಲಿ ರಣ |
ಮಲ್ಲನಾಗಿಹೆ ಬಲು ತರದಿ ಮನ |
ತಲ್ಲಣವಗೊಂಡಂತೆ ತೋರ್ಪುದು |
ಮೆಲ್ಲಮೆಲ್ಲನೆ ಗಮನವೇನಿದು || 1 ||

ಸುರಪಮುಖ್ಯಾಮರರು | ನಿನ್ನಯ ಕೀರ್ತಿ |
ನಿರತ ಕೊಂಡಾಡುವರು ||
ಧರಣಿಪಾಲರು ಅನವರತ ತವ |
ಚರಣಕಾನತರಾಗಿ ಬಾಳ್ವರು |
ಪರಮಪಾವನಚರಿತ ಬಂದಿಹ |
ಕೊರತೆ ತಿಳುಹೈ ಕರುಣಸಾಗರ || 2 ||

ಪರಿಕಿಸಿದರೆ ಅಂಗವು | ಗಾಯದಿ ಕೂಡಿ |
ಸುರಿವುದು ಶೋಣಿತವು ||
ತುರಗ ಗಜರಥವಡರಿ ನೀ ಸಂ |
ಚರಿಪ ಕಾರ್ಯದಿ ದುರ್ಧರಂಗಳು |
ದೊರಕಿದುದೊ ನಾನರಿಯೆ ಕೃಪೆಯಿಂ |
ದರುಹು ಎನುತಲಿ ಕರವ ಮುಗಿದನು || 3 || 79 ||

**ಮಧ್ಯಮಾವತಿ - ಅಷ್ಟ**

ಏನನುಸುರುವೆನು | ಎನ್ನಯ ಕಷ್ಟ |
ವೇನನುಸುರುವೆನು || ಪ ||
ಮಾನಾಪಮಾನವ ತಿಳಿಯದ ನಿನ್ನೊಡ |
ನೇನನುಸುರುವೆನು || ಅ.ಪ||
ತೊರೆದು ಧರ್ಮಾಚರಣೆಯನು | ಗುರು |
ಹಿರಿಯರ ಬಗೆ ಮರೆದವನು ||
ನಿರತವು ಹಗಲಿರುಳೆಂಬುದನೆಣಿಸದೆ |
ತರುಣಿಯರೊಡನಾಡುತ ಜೀವನವನು |
ಬರಿಗೈದೆಯಲ್ಲೋ ಧೂರ್ತ | ಆಸ್ಥಾನದ |
ಮರಿಯಾದೆ ಕಳೆದೆ ವ್ಯರ್ಥ || ಏನ || 1 ||

ಧರೆಯೊಳು ಬಲುವೀರನೆನಿಸಿ | ರಾಜ್ಯ |
ಪರಿಪಾಲಿಸುವೆ ಕೀರ್ತಿ ಮೆರೆಸಿ ||
ನಿರತನಾಗಿಹೆ ರಾಜಕಾರ್ಯದಿ ನಾ ನಿನ್ನ |
ಮರುಳಾಟಕೇನೆಂಬೆನು | ಉದ್ಯಾನ ವಾ |
ನರನೊಬ್ಬ ಬರಿಗೈವನು | ಎಂದರಿತು ನಾ |
ಪರಿಕಿಸಲೈದಿದೆನು || ಏನ || 2 ||

ಸೆರೆಯೊಳು ಚರರು ಗೋಳಿಡಲು | ತಾನು |
ಕರಗಳ ಬಿಡಿಪ ಕಾರ್ಯದೊಳು ||
ನಿರತನಾಗಿರೆ ವನಚರನಿರನೆಲ್ಲವ |
ಮರೆಯಿಂದ ನೋಡಿದನು | ಮುಸಲ ಕೊಂಡು |
ಪರಚಿ ಮೈಯೋಡಿದನು | ಎನ್ನಯ ಮಾನ |
ಹರಣವ ಮಾಡಿದನು || ಏನ || 3 || 82 ||

**ವಾರ್ಧಕ**

ತಾನೆಣಿಕೆಗೊಳದೆ ರಣಸನ್ನಾಹವುಳಿದು ಉ |
ದ್ಯಾನಕ್ಕೈದಿದರಿಂದಲಿನಿತಾಯ್ತು ವಾರ್ತೆಯಂ |
ನೀನನ್ಯರಿಂಗರುಹದಿರು ಮುಸಲ ವಶಗೈವ ಬಗೆ ತಿಳಿಯೆನೆನಲೆಂದನು ||
ವಾನರನ ಕೆಣಕಿ ಗರ್ವದಿ ಕಳೆದೆ ಕುಲದ ಅಭಿ |
ಮಾನವಿದಕೇನೆಂಬರೈ ಮುಸಲ ಯತ್ನದಿಂ |
ದಾನು ತಹೆನೆಂದುದಕೆ ನಾಚಿ ಹಲಧರ ಪುರಕೆ ತೆರಳೆ ಹರಿ ಯೋಚಿಸುತಲಿ || 1 || 83 ||

**ಕಾಂಬೋಧಿ - ಝಂಪೆ**

ಸತ್ವವಂತನು ಸಕಲ ಪೃಥ್ವಿಪಾಲರ ಪಾರು |
ಪತ್ಯವನು ಮಾಳ್ಪೆ ತಾನೆನುತ ||
ಚಿತ್ತದಲಿ ಉಬ್ಬಿರುವ ಅಗ್ರಜನ ಗರ್ವವನು |
ಯತ್ನದಲಿ ತೀರಿಸಿದೆನಿನ್ನು || 1 ||

ಈರೇಳು ಲೋಕ ಪಾಲಿಪ ಹರಿಯ ಪೊತ್ತು ಸಂ |
ಚಾರ ಗೈಯುವೆನು ತಾನೆನುತ ||
ಭಾರಿ ಕೊಬ್ಬಿಹ ಖಗನ ಮಾರುತಿಯ ದೆಸೆಯಿಂದ |
ತೀರಿಸುವೆನೆಂದು ಕರೆದೆಂದ || 2 ||

ಘನ ಬಲಾನ್ವಿತ ಮಾನಧನ ಮೂರು ಲೋಕವರೆ |
ಕ್ಷಣದಿ ಸುತ್ತಾಡಿ ಬಹ ಚತುರ ||
ವಿನತಾಕುಮಾರ ನಿನಗೆಣೆ ಯಾರು ಎನಗೆ ನೀ |
ನನುಯಾಯಿಯಾಗಿರುವೆ ನಿರತ || 3 ||

ಮೇಲಾದ ಕಾರ್ಯಗಳ ಸಾಧಿಸಿದ ನಿನ್ನೊಡನೆ |
ಪೇಳಲಿನ್ನೆಂತು ಈ ಹದನ ||
ಕೀಳು ಉದ್ಯೋಗವೆಂದೆನುತ ಬೇಸರಿಸದೀ |
ಕಾಲದೊಳು ಮಾನವುಳುಹೆಂದ || 4 ||

ಪುರದ ಉಪವನಕೆ ವಾನರ ಪೊಕ್ಕು ಕಾವಲಿನ |
ಚರರ ಹೊಡೆದಟ್ಟಿ ಶೋಭಿಸುವ ||
ತರುಲತೆಗಳಂ ಮುರಿಯುತಿಹನಂತೆ ಬಡಿದಟ್ಟಿ |
ತ್ವರಿಯದಿಂ ಬಾರೆನಲು ಪೇಳ್ದ || 5 || 88 ||

**ಮಾರವಿ - ಅಷ್ಟ**
ಏನೆಂಬೆ ನಾನಿದಕೆ | ಎನ್ನಯ ಮಾನ |
ಹಾನಿಯ ಗೈವುದಕೆ ||
ನೀನುಸುರುವೆಯೊ ಗೀರ್ವಾಣರ ಬಗೆಯದ |
ತ್ರಾಣನು ಬಡಿವುದೆ ಹೀನ ವಾನರನನು || 1 ||

ಜಲಧಿಯ ಬತ್ತಿಪುದು | ಮಹಾಮೇರು |
ಸೆಳೆದು ತಂದೊಪ್ಪಿಪುದು ||
ಸುಲಭದಿ ನಡೆಸುವ ಬಲವಂತನೊಡನಿಂಥ |
ಕೆಲಸವ ಪೇಳ್ವುದೆ ತಿಳಿದು ನೀನೀ ರೀತಿ || 2 ||

ಮಾತೆಯ ನುಡಿಗೆ ಹಿಂದೆ | ಗೆಲಿದು ಸುರ |
ನಾಥನ ಸುಧೆಯ ತಂದೆ ||
ದೂತನ ತೆರದೊಳು ಕೋತಿಯ ಪಿಡಿಯಲು |
ಭೂತಳದೊಳಗೆನ್ನ ಖ್ಯಾತಿ ಕುಗ್ಗುವುದಯ್ಯ || 3 ||

**ಭಾಮಿನಿ**
ಬೇಸರಿಸದಿರು ವೇಳೆ ಕಳೆದರೆ |
ನಾಶವಪ್ಪುದು ಉತ್ತಮದ ವನ |
ಕೀಶನನು ಪಿಡಿವುದಕೆ ವಿಕ್ರಮರೆಲ್ಲ ನಾಚುವರು ||
ಕ್ಲೇಶಗೊಳ್ಳದೆ ನಡೆಸಿದರೆ ಸಂ |
ತೋಷವಪ್ಪುದು ಎನ್ನ ಮನಕೆನು |
ತಾ ಸರೋಜಾಂಬಕ ಸುಪರ್ಣನ ಜವದಿ ಬೀಳ್ಕೊಟ್ಟ || 1 || 92 ||

**ಕೇದಾರಗೌಳ - ಝಂಪೆ**
ನಡೆತರಲು ತಿಳಿದ ಮನದಿ | ಪರಸೇವೆ |
ಕಡು ಕಷ್ಟ ನಿರತ ಜಗದಿ ||
ನುಡಿದು ನಿಂದಿಪರೆನ್ನನು | ಮರ್ಕಟನ |
ಬಡಿಯುವುದೆ ವೀರ ಭಟನು || 1 ||

ಗರಿಯ ಗಾಳಿಯಲಿ ಜಗವ | ಹಾರಿಸುವೆ |
ಮುರಿವೆ ಕಾಲನ ದಂಡವ ||
ಹರನ ಶೂಲವ ಸೆಳೆವೆನು | ಕಂಡೆಡೆಗೆ |
ಹರಿಯನೇ ಕೊಂಡೊಯ್ಯುವೆನು || 2 ||

ಗರುಡ ದೇವನು ಎನುತಲಿ | ಪೂಜಿಪರು |
ನಿರತ ತ್ರೈಲೋಕ್ಯದಲ್ಲಿ ||
ಕಿರಿದಾಯ್ತು ಬಾಳ್ವ ಅಮಮ | ಸೇವೆಯಿಂ |
ಬರಿದೆ ಕೆಡಿಸಿದೆನು ಜನುಮ || 3 || 95 ||

**ಕಂದ**

ಬಲು ದಿನದಿಂ ಸೇವಿಸಿ ದಿನ |
ಕಳೆದುದರಿಂದೆನಗೆ ಪೇಳ್ವ ಶ್ರೀವರನಿದರಂ ||
ಹುಲು ಕೋತಿಯ ಕೆಣಕುವ ಘನ |
ಫಲ ಕೈಗೂಡಿದುದೆನುತ್ತ ಮುಂದೈ ತಂದಂ || 1 || 96 ||

**ಸೌರಾಷ್ಟ್ರ - ತ್ರಿವುಡೆ**

ದೂರದಿಂ ಪರಿಕಿಸಿದ ತರುವ |
ನ್ನೇರಿರುವ ಮರುತಜನ ಮನದಿ ವಿ |
ಚಾರಿಸಿದ ಕಾನನದಿ ಚರಿಸಲು | ತೀರದಿವಗೆ || 1 ||

ವೃದ್ಧತನದಿಂ ಬಳಲಿ ಉಪವನ |
ಹೊದ್ದಿಕೊಂಡಿಹ ಉದರಕಿಲ್ಲದೆ |
ಬುದ್ಧಿ ಪಲ್ಲಟವಾಗಿ ಫಲಗಳ | ಮೆದ್ದನಿವನು || 2 ||

ಹೊಡೆದರೊಂದೇ ಹತಿಗೆ ಪ್ರಾಣವ |
ಬಿಡುವನೀತನ ಮಾತಿನಿಂ ಹೊರ |
ಪಡಿಪೆನೆನುತಲಿ ತೆರಳಿ ಹತ್ತಿರ | ನುಡಿದನವಗೆ || 3 || 99 ||

**ಭೈರವಿ - ಅಷ್ಟ**

ಎಲೊ ಬಡ ಮುದಿ ವಾನರ | ಉದ್ಯಾನವ |
ಒಳಪೊಕ್ಕು ಕಾಯುವರ ||
ಹಲವಂಗದಲಿ ಕಷ್ಟಗೊಳಿಸಿ ಕುಸುಮಫಲ |
ಗಳ ಕೆಡಿಸಿದೆಯೊ ಚೋರ || 1 ||

ವಾನರರಾಹಾರವು | ವನದೊಳಿಹ |
ನಾನಾ ಜಾತಿಯ ಫಲವು ||
ತಾನು ಮೆಲ್ಲಲು ತಡೆದವರ ಬಡಿದೆ ನಿನ |
ಗೇನು ಎನ್ನಲಿ ದ್ರೋಹವು || 2 ||

ಬುದ್ಧಿಹೀನರ ಕುಲದಿ | ಪುಟ್ಟಿದ ನೀನು |
ವೃದ್ಧನಾಗಿಹೆ ಪ್ರಾಯದಿ ||
ಸದ್ದಿಲ್ಲದಂದದಿ ತೆರಳು ಸಾಯುವೆ ಯಾಕೆ |
ಉದ್ಧಟದಿಂ ವನದಿ || 3 ||

ಕೋತಿ ನಾನಿದು ನಿಜವು | ಕೇಳಲು ಪಕ್ಷಿ |
ಜಾತಿಗೇನಧಿಕಾರವು ||
ಮಾತನಾಡದೆ ಪೋಗು ಖಾತಿಯ ಬರಿಸಲು |
ಘಾತಿಪೆ ಕ್ಷಣದೊಳೆಂದ || 4 || 103 ||

**ಮಾರವಿ - ಏಕ**

ಬಡ ವಾನರ ನೀ ನಡೆಯೆಂದರೆ ಬಲು |
ದುಡುಕಿಂ ನುಡಿದೆಯಲ ||
ಬಿಡುವೆನೆ ಈ ಕ್ಷಣ ಪಿಡಿದೊಯ್ಯುವೆನೆಂ |
ದೊಡನೆ ಬಾಲ ತುಡುಕಿ || 1 ||

ನೆಗೆದಾಕ್ಷಣ ಆಶುಗಸುತ ಮುಷ್ಟಿಯ |
ಬಿಗಿದು ಮಗುಳೆ ಖಗನ ||
ಜಗತಿಗೊರಗಿಸುತ ಮೊಗ ನೆಗಹದ ತೆರ |
ಬಗೆ ಬಗೆ ಹಿಂಸಿಸುತ || 2 ||

ಸುತ್ತುತ ಬಾಲದಿ ಎತ್ತಿ ಮೇಲೆ ಬೀ |
ಸುತ್ತ ಶರಧಿಗಿಟ್ಟು ||
ಮತ್ತೆ ಮಳಲೊಳದ್ದುತ್ತ ಎಳೆವುತ |
ತ್ತಿತ್ತ ಪೊರಳಿಸುತಲಿ || 3 || 106 ||

**ವಾರ್ಧಕ**

ಉದಧಿಯಿಂದುದಕಮಂ ಕುಡಿಸುತ್ತ ಮೇಲಿಟ್ಟು |
ಒದೆದು ಕಷ್ಟವ ಪಡಿಸೆ ರೋದಿಸುವನಾತನಂ |
ವಿಧವಿಧದಿ ದಂಡಿಸುತ ಗರಿಗಳಂ ಕಿತ್ತು ಜೀವವನುಳಿಹಿ ಮರವಡರಲು ||
ಸುಧೆಯುಂಡ ಕಾರಣದಿ ಖಗನುಳಿದನಲ್ಲದಡೆ |
ಬದುಕುವವರುಂಟೆ ಮರುತಜನ ಪ್ರಹಾರದಿಂ |
ಮದಗರ್ವವಡಗಿ ಮೆಲ್ಲನೆ ಚೀರುತೇಳುತ್ತ  ಹರಿಯ ಸನ್ನಿಧಿಗೈದನು || 1 || 107 ||

**ಸಾರಂಗ - ಅಷ್ಟ**

ಬೀಳುತೇಳುತ ಬಹ ಖಗನ | ಕಂಡು |
ಶ್ರೀಲೋಲನುಸುರಿದ ನಿನ್ನ ||
ಪೋಲುವರಾರಿಲ್ಲ ಮೂಲೋಕ ರೆಕ್ಕೆಯ |
ಗಾಳಿಯಿಂದೊಮ್ಮೆಗೆ ಧೂಳೀಪಟವಗೈವೆ || 1 ||

ತೆರಳದೆ ಉದ್ಯಾನದೆಡೆಗೆ | ಮೇರು |
ಗಿರಿಯ ಕೀಳಲು ಪೋಗಿ ಕಡೆಗೆ |
ಜರಿದುದರಿಂದ ಜಜ್ಜುರಿವಾದುದೊ ಮೈಯ |
ಗರಿಗಳುದುರಿ ರಕ್ತ ಸುರಿವುದೆ ಪೇಳಯ್ಯ || 2 ||

ಹರನ ತ್ರಿಶೂಲವ ಮುರಿವೆ | ದಂಡ |
ಧರನನು ಬಂಧಿಸಿ ತರುವೆ ||
ಶರಧಿಯ ಬತ್ತಿಪ ಧುರಧೀರ ನೀ ಪೋಗೆ |
ತರುಚರ ತರಹರಿಸುತ ಮರೆಯಾದನೊ || 3 || 110 ||

**ಕಂದ**
ನಿನ್ನಂ ಪರಿಕಿಸಿದರೆ ತನು |
ವನ್ನೀಗುವನವನೆನುತ್ತ ತಿಳಿದಟ್ಟಿದೆ ನಾ ||
ಇನ್ನೇನೆಸಗಿದೆ ಕೇಶನ |
ಮನ್ನಿಸಿ ಕಳುಹಿದೆಯೊ ಪೇಳು ನೀನೆನಲೆಂದಂ || 1 || 111 ||

**ಪಂತುವರಾಳಿ - ರೂಪಕ**
ಬಳಲಿ ಬಂದೆ ಉಳಿದು ಪ್ರಾಣದಿ | ಕೇಶನೆನ್ನ |
ಹಲವು ಭಂಗ ಗೈದ ತ್ರಾಣದಿ ||
ಗೆಲುವರಿಲ್ಲ ಧುರದೊಳವನ |
ಬಲು ಸಮರ್ಥ ಪಿಡಿದು ಎನ್ನ |
ಮಳಲೊಳದ್ದಿ ಜಲಧಿಗಿಟ್ಟ |
ತಿಳುಹಲರಿಯೆ ಬಂದ ಕಷ್ಟ || 1 ||

ಕರವ ಮುಗಿವೆ ನಿರತ ನಿನ್ನಯ | ಸೇವೆಯಿತ್ತು |
ಕರುಣದಿಂದ ಸಲಹು ಚಿನ್ಮಯ ||
ಪರಮಪುರುಷ ವಿಶ್ವವಂದ್ಯ |
ಮೆರೆದೆ ಕೊಬ್ಬಿ ಗರುವದಿಂದ |
ಮರೆದು ತಪ್ಪ ಪಾಲಿಸೆನುತ |
ಚರಣಕೆರಗಿ ನಿಂದನಾತ || 2 || 113 ||

**ವಾರ್ಧಕ**
ಬಲು ವಿಧದಿ ತರಹರಿಸುತಳುತರಿವ ಗರುಡನಂ |
ನಳಿನಾಕ್ಷ ತಕ್ಕಯಿಸಿ ನುಡಿದ ಕೊಬ್ಬಿದಕೆ ಪ್ರತಿ |
ಫಲವಾಯ್ತು ಕಪಿಯಾದರೇನವಂ ಭಕ್ತರೊಳಗಗ್ಗಳೆಯ ಸೇವೆಯಿಂದ ||
ಬಳಲಿ ಹಿಂದಣ ಯುಗದಿ ಎನ್ನಾಜ್ಞೆಯಿಂ ಜಗದಿ |
ನೆಲೆಸಿರ್ಪ ಮಮ ದರ್ಶನಕೆ ಬಂದನಾತನಂ |
ನಲಿವಿನಿಂದೊಡಬಡಿಸಿ ಕರೆದು ಎನ್ನೆಡೆಗೆ ತಾರೆನಲು ನಡುಗುತಲೆಂದನು || 1 || 114 ||

**ಕೇದಾರಗೌಳ - ಅಷ್ಟ**
ಉಳಿದು ಒಮ್ಮೆಗೆ ಪುಣ್ಯಫಲದಿ ಬಂದೆನು ಇನ್ನು |
ಕಳುಹಿ ನೀ ಕೊಲಿಸುವೆಯ ||
ನಳಿನಾಕ್ಷ ನೀನಿದ ತಿಳಿದು ಪೇಳುವುದೇಕೆ |
ಜನುಮಾಂತರಕು ಪೋಗೆನು || 1 ||

ತನುಕಾಂತಿ ಕೋಟಿ ದ್ಯುಮಣಿ ಪ್ರಭೆಯಂತಿದೆ |
ಕೆಣಕಿ ಬಾಳುವರಿಲ್ಲವು ||
ವನಚರನಾದರು ರಣಭಯಂಕರನಾತ |
ನನು ನುಡಿಸಲು ತೀರದು || 2 ||

ಆತನ ಬಳಿಗೆನ್ನ ಕಳುಹಿಪುದಕೆ ನೀನೇ |
ಘಾತಿಪುದುಚಿತ ಜೀಯ ||
ಮಾತೆರಡಿಲ್ಲವೆನ್ನುತ ಭೀತಿಗೊಂಡರೆ |
ಮಾತುಳಾಂತಕನೆಂದನು || 3 || 117 ||

**ಭಾಮಿನಿ**
ತೆರಳು ಕೀಶನ ಬಳಿಗೆ ಶ್ರೀರಘು |
ವರನು ದ್ವಾರಾವತಿಯೊಳಿಹನೆಂ |
ದರುಹು ರಾಘವನೆನ್ನ ಕಳುಹಿದನೆಂದಡವ ನಿನ್ನ ||
ಕರೆದು ಮನ್ನಿಪನದಕೆ ಪೋಗೈ |
ಸ್ಮರಿಸಿ ರಾಮಧ್ಯಾನದಿಂದಲಿ |
ತ್ವರಿಯದಿಂ ನೀನೆನುತ ತಡವರಿಸುತ್ತ ಬೀಳ್ಕೊಟ್ಟ || 1 || 118 ||

**ಆರ್ಯ ಸವಾಯ್ - ಏಕ**
ಕಳುಹುತ ಖಗನಂ ನಳಿನದಳಾಂಬಕ |
ಬಳಿಗೆ ಕರೆದು ಭಾಮೆಯೊಳೆಂದ ||
ಬಲು ದಿನದಿಂ ರಘುಕುಲಜನ ಕಾಣದೆ |
ಬಳಲಿ ಬರುವ ಮಾರುತ ಕಂದ || 1 ||

ಹಿಂದೆ ನುಡಿದ ತೆರದಿಂದಲಿ ದಶರಥ |
ನಂದನ ರೂಪಾಂತಪೆ ನಾನು ||
ಚಂದದಿ ಜನಕಜೆಯಂದದಿಂದಾತಗೆ |
ಸಂದರ್ಶನ ಪಾಲಿಸು ನೀನು || 2 || 120 ||

**ವಾರ್ಧಕ**
ಎನ್ನ ಪೋಲ್ವಳೆ ಸೀತೆ ಖಳನು ಕದ್ದೊಯ್ದವಳ |
ಬಣ್ಣಿಸುವದೇಕೆ ಮೂಲೋಕದೊಳು ಸಕಲ ಸಂ |
ಪನ್ನಳಾಗಿಹೆ ತಾನು ಜನಕಜೆಯ ನೂರ್ಮಡಿಗೆ ಮಿಗಿಲಾಗಿ ಮೆರೆವೆನೆನುತ ||
ಸ್ವರ್ಣಭೂಷಣದಿಂದಲಂಕಾರಮಂ ಗೈದು |
ಚಿನ್ಮಯಾತ್ಮಕನ ಒತ್ತಿನಲಿ ಕುಳಿತಿರಲಾಗ |
ಪನ್ನಗಾರಿಧ್ವಜನ ನುತಿಸುತ್ತ  ಸುರಮುನಿಪ ಬಂದು ಮಣಿದಿಂತೆಂದನು || 1 || 121 ||

**ಕಾಂಬೋಧಿ - ತ್ರಿವುಡೆ**
ಮಾಧವ ನಿತ್ಯಾನಂದ | ಜಯ ಜಯ ಮಧು |
ಸೂದನ ಶ್ರೀಗೋವಿಂದ ||
ಆದಿಯೊಳು ಮೀನಾದೆ ಲೋಕವ |
ನಾಧರಿಸಿ ಭೂದೇವಿಯಂ ಖಳ |
ಬಾಧಿಸಲು ಛೇದಿಸುತಲಾ ಪ್ರಹ |
ಲ್ಲಾದನಂ ನೆರೆ ಕಾಯ್ದ ನರಹರಿ || 1 ||

ನೆಲವ ಈರಡಿಯಿಂದಲಿ | ಸೆಳೆದು ಮಹಾ |
ಬಲಿಯ ಪಾತಾಳದಲ್ಲಿ ||
ನಿಲಿಸಿ ಕ್ಷತ್ರಿಯ ಕುಲವಳಿಸಿಕೊಳು |
ಗುಳದಿ ಖಳ ದಶಗಳನ ಮರ್ದಿಸಿ |
ನಲಿದು ಗೋವಳರೊಡನೆ ಗೋಕುಲ |
ನಿಲಯದೊಳು ಗೋವ್ಗಳನು ಸಲಹಿದೆ || 2 || 123 ||

**ಬೇಗಡೆ - ಅಷ್ಟ**

ಎಂತು ಬಣ್ಣಿಪೆ ನಿನ್ನ ಮಹಿಮೆಯನು | ಸದ್ಭಕ್ತನಾ ಹನು |
ಮಂತ ಕಾಣದೆ ರಾಮರೂಪವನು ||
ಚಿಂತೆಯಿಂದಲಿ ತೊಳಲಿ ಬಲು ದೇ |
ಶಾಂತರವನುಳಿದಿಲ್ಲಿಗೈದಿಹ |
ಸಂತವಿಸಲಾತನನು ಸೀತಾ |
ಕಾಂತನಾಗಿಹೆ ಕಂತುಜನಕನೆ || 1 ||

ಒತ್ತಿನಲಿ ಭೂಪುತ್ರಿ ಜನಕಜೆಯ | ಕಾಣದಿರಲಾತನು |
ಚಿತ್ತದಲಿ ಕಳವಳಿಸುವನು ಜೀಯ ||
ಸತ್ಯಭಾಮೆಯು ಉತ್ತಮಳು ಮಮ |
ಪತ್ನಿಯೆನ್ನುತ ನೀನು ಸಂತಸ |
ವೆತ್ತಿರಲಿಕದು ಯುಕ್ತಮಪ್ಪುದೆ |
ಬಿತ್ತರಿಪೆ ಬೇಸತ್ತುಕೊಳದಿರು || 2 ||

ನೀ ತಿಳಿಯೆಯಾ ಸೀತೆಯಂ ನಿರತ | ಸೇವಿಸುತ ಬಾಳುವ |
ದೂತಿಯೋಲ್ಕಾಣಿಪಳು ಶ್ರೀನಾಥ ||
ಯಾತುಧಾನರ ವಧೆಗೆ ಜನಕನ |
ಜಾತೆಯಾಗಿಹಳಾದಿಲಕ್ಷ್ಮಿಯು |
ಈ ತರುಣಿಯಂ ಪರಿಕಿಸಿದರಾ |
ವಾತಸಂಭವ ಖಾತಿಗೊಳ್ಳುವ || 3 || 126 ||

**ಕಂದ**

ಮುನಿವರನಿಂತೆನೆ ಭಾಮೆಯು |
ಜನಕಜೆಯಿಂ ಸೊಬಗಿನಿಂದ ತೋರುವೆ ತಾನೀ ||
ಕ್ಷಣಕೆನ್ನುತ ಸಿಂಗರಿಸಿಯೆ |
ಘನತವಕದಿ ಬರಲು ಪೇಳ್ದ ನಾರದನವಳೋಳ್ || 1 || 127 ||

**ವಾರ್ಧಕ**

ಇಂದಿರೆಯೆ ಜನಿಸಿ ರುಕ್ಮಿಣಿಯಾಗಿರುವಳು ನೀ |
ಗಂಧರ್ವಸುತೆ ಚಂದ್ರಸೇನೆ ಪೂರ್ವದಿ ರಾಮ |
ಚಂದ್ರನಂ ಧ್ಯಾನಿಸುತಲಿರಲು ಮಹಿರಾವಣಂ ಸೆರೆಯೊಳಿರಿಸಲ್ಕಾತನ ||
ಕೊಂದು ರಾಘವ ನಿನ್ನ ಬಿಡಿಸಿ ದ್ವಾಪರದಿ ನಾ |
ಬಂದಪೆನು ಕೃಷ್ಣಾವತಾರದಿಂ ಭಾಮೆಯಾ |
ಗೆಂದಭಯ ಪಾಲಿಸಿದ ತೆರದಿ ಸೇರಿದೆಯಾದಿಲಕ್ಷ್ಮಿ ನೀನಲ್ಲವೆಂದ || 1 || 128 ||

**ಮಧ್ಯಮಾವತಿ - ತ್ರಿವುಡೆ**

ಅರುಹೆ ಪೂರ್ವಾಗಮವ ಭಾಮೆಯ |
ಗರುವ ಹಿಂಗಿತು ಭಕ್ತಿಯಿಂದಲೆ |
ಚರಣಕಾನತಳಾಗಿ ಪೇಳ್ದಳು |
ಮರೆವುದೆನ್ನಪರಾಧವ | ಕರುಣನಿಧಿಯೆ || 1 ||

ಪರಮಪುರುಷನೆ ವಿಶ್ವನಾಯಕ |
ಮರೆಯದಂದದಿ ನಿನ್ನ ನಾಮ |
ಸ್ಮರಣೆಯಲ್ಲದೆ ಜನುಮ ಜನುಮದಿ |
ಚರಣಸೇವೆಯ ಭಾಗ್ಯವ | ಪಾಲಿಸಯ್ಯ || 2 ||

ಬನ್ನ ಬಡುತಿರಲೆಂದ ಕೃಪೆ ಸಂ |
ಪೂರ್ಣ ನಿನ್ನಲ್ಲಿಹುದು ಸತತವು |
ಚಿನ್ನ ಒಂದೇಯಾದರದರೊಳು |
ಬಣ್ಣ ಬೇರಾಗಿರುವುದು | ಸಿದ್ಧಮಾಗೆ || 3 ||

ನಿರತ ಎನ್ನಯ ಚರಣ ಸೇವಿಪ |
ಸಿರಿಯೆ ರುಕ್ಮಿಣಿ ನಾಮದಿಂದವ |
ತರಿಸಿ ಸೇವಿಸುತಿಹಳು ಮೊದಲಿಗೆ |
ಧರಣಿಸುತೆಯಾಗಿರ್ದಳು | ಲೋಕಮಾತೆ || 4 ||

ಹರನು ಬಲ್ಲನು ಸರಸಿಜೋದ್ಭವ |
ಸುರಪ ಮುಖ್ಯಾಮರರು ತಿಳಿವರು |
ಮರುತಸುತ ಮನುಮುನಿಗಳೆಲ್ಲರು |
ಅರಿವರಾಕೆಯ ಮಹಿಮೆಯ | ದೃಢತೆಯಿಂದ || 5 ||

ಎಂದು ಸಂತೈಸುತ್ತ ಭಾಮೆಯ |
ಇಂದಿರಾವರ ಕರೆಯೆ ರುಕ್ಮಿಣಿ |
ಬಂದು ಹರಿಯಡಿಗೆರಗಿ ವಿನಯದಿ |
ವಂದಿಸಲು ಸುರಮುನಿಪಗೆ | ಪೇಳ್ದನಿವನು || 6 || 134 ||

**ಕಾಂಬೋಧಿ - ಝಂಪೆ**
ಶರಧಿಸಂಭವೆ ಸಕಲ ಶರಣರಕ್ಷಕಿ ಪುಣ್ಯ |
ಚರಿತೆ ಸೌಭಾಗ್ಯದಾಯಿನಿಯೆ ||
ಸರಸಿಜಾಸನ ಮುಖ್ಯ ಸುರನರೋರಗನಮಿತೆ |
ಹರಿಯರಸಿ ಪಾವನಾತ್ಮಕಿಯೆ || 1 ||

ಧರೆಗೆ ಯುಗಯುಗದೊಳವತರಿಸಿ ಭೂಭಾರವಪ |
ಹರಿಪ ಕಾರ್ಯಗಳಿಗನುವಾಗಿ ||
ಮೆರೆವ ನಿನ್ನಯ ಮಹಿಮೆಯರಿವರಿನ್ನಾರು ವಿ |
ಸ್ತರಿಸಲಳವಲ್ಲ ಫಣಿಪತಿಗೆ || 2 || 136 ||

**ಕಂದ**
ಈ ತೆರದಿಂ ಸ್ತುತಿಸುತ ಶ್ರೀ |
ನಾಥನೊಳಪ್ಪಣೆಯಗೊಂಡು ತೆರಳಲ್ಕಿತ್ತಂ ||
ವಾತಾತ್ಮಜನೆಡೆಗಂ ರಘು |
ನಾಥನ ಸ್ಮರಣೆಯೊಳು ಬಂದ ಖಗಪತಿ ಭಯದಿಂ || 1 || 137 ||

**ಸಾಂಗತ್ಯ - ರೂಪಕ**
ಸ್ಮರಿಸುತ್ತ ರಾಮನ ನಡೆತಪ್ಪ ಗರುಡನ |
ಪರಿಕಿಸಿ ಮರುತಜನಾಗ ||
ಬೆರಗಾದ ಪ್ರಾಣದೊಳುಳಿದು ಪೋಗಿಹನೀತ |
ಮರಳಿದನೇತಕೆನ್ನೆಡೆಗೆ || 1 ||

ಅರುಹಿದರಾರು ಈ ಪರಮಪಾವನ ನಾಮೋ |
ಚ್ಚರಣೆಯ ಕಪಟದೊಳೆನ್ನ ||
ಕೊರಳ ಕೊಯ್ಯುವ ಮಹಾ ತಂತ್ರವೊ ಭಕ್ತಿಯೊ |
ಪರಿಕಿಪೆನಂತರ್ಯವೆನುತ || 2 ||

ಹತ್ತಿರ ತೆರಳುತ ಕರೆದೆಂದನವನೊಳು |
ಉತ್ತಮ ನಾಮವು ನಿನಗೆ ||
ಬಿತ್ತರಿಸಿದರಾರು ಚಿತ್ತದಿ ಹೊಳೆದುದೊ |
ಸತ್ಯಮಾಜದೆ ಪೇಳ್ವುದೆನಲು || 3 ||

ತಿಳಿಯದೆ ನಿನ್ನೊಳು ಹಳಚಿದೆ ಪ್ರಾಣವ |
ನುಳುಹಿದಾತನನು ವಂಚಿಪೆನೆ ||
ನಳಿನಾಕ್ಷ ರಾಮನು ಜನಕಜೆ ಸಹಿತಲಿ |
ಕಳುಹಿದನುಪದೇಶವಿತ್ತು || 4 ||

ಕರುಣಸಾಗರ ನಿನ್ನ ಬರಪೇಳ್ದನೆನ್ನೊಳು |
ಮರೆಯ ಮಾತಲ್ಲ ಒತ್ತಿನಲಿ ||
ಬರುವೆಯಾದರೆ ತೋರ್ಪೆ ತಾನೆನೆ ಕೇಳುತ್ತ |
ಮರುತಜ ನುಡಿದನಾತಂಗೆ || 5 || 142 ||

**ವಾರ್ಧಕ**
ಕಾಣಿಸಿದಡಾ ರಾಮನಂ ನಿನಗೆ ಸಖನಹೆನು |
ಜಾನಕೀವರನಿಲ್ಲದಿರಲಾ ಕ್ಷಣಾರ್ಧದಿಂ |
ಪ್ರಾಣವಂ ಹೀರುವೆನು ಎನಲೊಡಂಬಟ್ಟು ಕರೆತಂದನಾ ವಾಯುಸುತನ ||
ಆನಂದದಿಂದಲವರೊಂದಾಗಿ ರಘುಪತಿಯ |
ಧ್ಯಾನಿಸುತ ನಡೆತರಲು ವಿಷ್ವರದಿ ಮಂಡಿಸಿದ |
ಭಾನುಕುಲ ಶರಧಿ ಚಂದ್ರಮ ರಾಮನಂ ಕಂಡು ಸ್ತುತಿಸಿದಂ ಭಕ್ತಿಯಿಂದ || 1 || 143 ||

**ಕಾಂಬೋಧಿ - ತ್ರಿವುಡೆ**
ರಾಮ ನೀರಜಲೋಚನ | ಪಾವನಕರ |
ನಾಮ ಪಾಪವಿಮೋಚನ ||
ಕಾಮಹರ ಸುಪ್ರೇಮ ನಿರುಪಮ |
ಕಾಮಿತಾರ್ಥಫಲಪ್ರದಾಯಕ |
ಶ್ರೀ ಮನೋಹರ ಕೋಮಲಾಂಗ ನಿ |
ರಾಮಯನೆ ಮಮ ಸ್ವಾಮಿ ರಘುವರ || 1 ||

ಬಾಲಾರ್ಕಕೋಟಿಭಾಸ | ದಾನವಕುಲ |
ಕಾಲ ಕ್ಷೀರಾಬ್ಧಿವಾಸ ||
ಮೂಲಪುರುಷ ಮುಕುಂದ ಸೀತಾ |
ಲೋಲ ಸಜ್ಜನಪಾಲ ಕೀರ್ತಿವಿ |
ಶಾಲ ಮನುಮುನಿಜಾಲವಿನುತ ವಿ |
ಶಾಲಮತಿ ಕರುಣಾಳು ಶ್ರೀಕರ || 2 || 145 ||

**ಕೇದಾರಗೌಳ - ಅಷ್ಟ**
ಎಂದು ಸಂಸ್ತುತಿಸಿ ಕೈ ಮುಗಿದು ನಿಂದಿಹ ವಾಯು |
ಕಂದನ ಬಿಗಿದಪ್ಪುತ ||
ಇಂದಿರಾವರನೆಂದ ಹಿಂದೆ ಪೇಳಿದ ತೆರ |
ದಿಂದ ದರ್ಶನವಿತ್ತೆನು || 1 ||

ನಿನ್ನಂತೆ ಸೇವಿಪರಿನ್ನಾರು ಶರಣಾಗ್ರ |
ಗಣ್ಯ ಮೊದಲೆ ನಿನಗೆ ||
ಮನ್ನಿಸಿ ಬ್ರಹ್ಮಪದವಿಯಿತ್ತಿರುವೆ ಇಂದಿ |
ಗಿನ್ನೇನು ಪಾಲಿಪೆನು || 2 ||

ಧಾರಿಣಿ ಭಾರಾಪಹಾರಕೆ ಕೃಷ್ಣಾವ |
ತಾರದಿ ಬಂದಿಹೆನು ||
ಸೇರುವೆ ನಿಜಧಾಮವನು ಕೆಲ ದಿನದಲಿ |
ತೀರುವುದೀ ಯುಗವು || 3 ||

ಬೇರೆ ಬೇರಾಕೃತಿ ತಳೆದರು ನಿನಗೆ ನಾ |
ಶ್ರೀರಾಮ ರೂಪವನು ||
ತೋರುವೆ ಯುಗ ಯುಗದಲಿ ಸ್ಥಿರಮಾಗಿರು |
ಧಾರಿಣಿಯಿರುವನಕ || 4 ||

ದೃಢಮನದಲಿ ನಿನ್ನ ಪೂಜಿಪ ಶರಣರ್ಗೆ |
ಕೊಡುತ ಇಷ್ಟಾರ್ಥವನು ||
ನಡೆಸೆಂದು ವಿನಯದಿ ಸಂತೈಸಿ ಬೀಳ್ಕೊಟ್ಟ |
ಜಡಜಾಕ್ಷ ವಾಯುಜನ || 5 || 150 ||

**ಸೌರಾಷ್ಟ್ರ - ತ್ರಿವುಡೆ**
ಕಲಿ ಮರುತಜನಿಂದ ಬಳಲಿದ |
ಹಲಧರನು ಈ ವಾರ್ತೆಯೆಲ್ಲವ |
ತಿಳಿದು ಚಿಂತಿಸುತೆಂದ ಸುಮ್ಮನೆ | ಕಲಹಗೈದೆ || 1 ||

ರಾಮಚಂದ್ರನ ನಿಂದಿಸುತ ಬಲ |
ರಾಮನೆನ್ನುವವ ಗರ್ವದಲಿ ಸಂ |
ಗ್ರಾಮ ಗೈದುದರಿಂದ ಯಶ ನಿ | ರ್ನಾಮವಾಯ್ತು || 2 ||

ಪರಮಪುರುಷನು ರಾಮ ಸಚರಾ |
ಚರಭರಿತನವತರಿಸಿ ಎನ್ನಯ |
ಕಿರಿಯನಾಗಿಹ ಅರಿಯದಾದೆನು | ಗರುವದಿಂದ || 3 || 153 ||

**ಭಾಮಿನಿ**
ಖೋಡಿತನವಂಗೈದೆ ಶೀಘ್ರದಿ |
ನೋಡಿ ಕಣ್ದಣಿವಂತೆ ಮಾತ |
ನ್ನಾಡಿ ವಿನಯದಿ ಮನವೊಲಿಪೆನೆಂದೆನುತ ಹಲಧರನು ||
ಮೂಡಿದುತ್ಸಾಹದಲಿ ಯದುಬಲ |
ಕೂಡಿ ಬರುತಿರೆ ಕಂಡು ಹರಿ ಕೈ |
ಜೋಡಿಸುತ ಬಿನ್ನಹವಗೈದನು ಮಧುರ ವಚನದಲಿ || 1 || 154 ||

**ಅಸಾವೇರಿ - ಏಕ**
ಏನಿದು ಆನಂದ ಮನದಿ | ಅಣ್ಣಾದೇವ | ಹುಲು
ವಾನರನೊಳು ಸೋತು ರಣದಿ | ಅಣ್ಣಾದೇವ ||
ಮಾನ ನೀಗಿ ಹಿಂದೆ ಸರಿದು | ಅಣ್ಣಾದೇವ | ನಿನ್ನ
ಆನನವು ಪ್ರಕಾಶವಾಯ್ತು | ಅಣ್ಣಾದೇವ || 1 ||

ಮುಸಲ ಕಳೆದುಕೊಂಡ ಬಗೆಯೊ | ಅಣ್ಣಾದೇವ | ಸತ್ವ |
ಕುಸಿದರಿಂದ ಉಬ್ಬಿರುವೆಯೊ | ಅಣ್ಣಾದೇವ ||
ಉಸುರು ಹದನ ಮಾಜದೆನಗೆ | ಅಣ್ಣಾದೇವ | ಪಾದ |
ಬಿಸಜಕೆರಗಿ ಬೇಡಿಕೊಂಬೆ | ಅಣ್ಣಾದೇವ || 2 || 156 ||

**ಯಮುನಾ ಕಲ್ಯಾಣಿ - ಝಂಪೆ**
ತಿಳಿಯದಾದೆನು ನಿನ್ನ ಒಳವ ಸಹಜಾತ |
ನಳಿನಾಕ್ಷ ನೀನೆನ್ನ ಬಳಿಯೊಳಿರೆ ಸತತ ||
ಬಲವೆಂತು ಕುಗ್ಗುವುದು ಸಕಲಲೋಕವನು |
ಸಲಹುವ ಚರಾಚರಾತ್ಮಕ ಪೂರ್ಣ ನೀನು || 1 ||

ಯುಗಯುಗದೊಳವತರಿಸಿ ಜಗಕೆ ಕಂಟಕರ |
ಬಗೆಬಗೆಯ ಯತ್ನದಲಿ ವಧಿಸಿ ಸಜ್ಜನರ ||
ಅಗಲದನುದಿನ ಧರ್ಮ ಸ್ಥಿರಗೊಳಿಪೆ ನೀನು |
ನಿಗಮವೇದ್ಯನು ಜತೆಯೊಳಿರಲು ಭಯವೇನು || 2 ||

ಕಿರಿಯ ಎನಗೆಂದೇನು ಅಣುವಿಗಣು ನೀನು |
ಹಿರಿಯ ಸಕಲರಿಗೆ ಬ್ರಹ್ಮಾಂಡನಾಯಕನು ||
ಉರಗೇಂದ್ರನಿಗೆ ನಿನ್ನ ಪೊಗಳಲಳವಲ್ಲ |
ನಿರತ ಸುಜ್ಞಾನಮಂ ನೀಡು ನಮಗೆಲ್ಲ || 3 || 159 ||

**ಭಾಮಿನಿ**
ಬಣ್ಣಿಸುತ ಬಲು ಬಗೆಯೊಳಾ ಮು |
ಕ್ಕಣ್ಣ ಸಖನನು ನೋಡಿ ದಣಿಯದೆ |
ತನ್ನೊಳಗೆ ಆನಂದದಿಂ ನಲಿದಾಡುವನ ನೋಡಿ ||
ಚಿನ್ಮಯನು ನಗುತೆಂದನಾತಗೆ |
ನಿನ್ನ ಸದ್ಭಕ್ತಿಯಲಿ ಯಾದವ |
ರನ್ನು ಪಾವನಗೈದೆ ಸುಖದಲಿ ಪಾಲಿಸನವರತ || 1 || 160 ||

**ಸಾಂಗತ್ಯ - ರೂಪಕ**
ಬಲನ ಸಂತೈಸುತ್ತ ಸೆಳೆದು ಮಾರುತಸುತ |
ಜಲಧಿಗಿಟ್ಟಿಹ ಮುಸಲವನು ||
ಕಳುಹಿ ಖಗೇಂದ್ರಗೆ ತರಿಸುತಾತನಿಗಿತ್ತು |
ನಳಿನನಾಭನು ಬೀಳುಗೊಂಡ || 1 ||

ನರಲೀಲೆಗಿದು ಶುಭಕರವೆಂಬ ತೆರದಿ ಶ್ರೀ |
ವರನಷ್ಟಮಾಂಗನೆಯರನು ||
ಸರಸದಿಂದಾಳುತ್ತ ಚರಣಸೇವೆಯಗೊಂಡು |
ಮೆರೆದಿರ್ದ ದ್ವಾರಕಾಪುರದಿ || 2 ||

ಇಳೆಗೆ ಮಂಗಳವಾಯ್ತು ಬಲುವಾದ್ಯರವದಿ ಪೂ |
ಮಳೆ ಸುರಿಸುತ್ತ ನಿರ್ಜರರು ||
ಜಲಜನಾಭನ ಸ್ತುತಿಸಲು ಲಲನೆಯರೆಲ್ಲ |
ನಲಿದು ಆರತಿ ಬೆಳಗಿದರು || 3 || 163 ||

**ವಾರ್ಧಕ**

ಧರಣಿಪ ಪರೀಕ್ಷಿತಗೆ ಶುಕಮುನಿಪನೊಲಿದು ವಿ |
ಸ್ತರಿಸಿದ ಕಥಾಸಮುದ್ರದೊಳೊಂದು ಬಿಂದುವೀ |
ಚರಿತೆಯಂ ಹರಿಯ ಸ್ತುತಿಸುತ ಯಕ್ಷಗಾನದೊಳು ಮನಕೆ ಹೊಳೆದಂದದಿಂದ ||
ವಿರಚಿಸಿದ ಬಲಿಪ ನಾರಾಯಣಂ ಭಾಗವತ |
ಶರಣಜನಕಿಂಕರಂ ಪೇಳಿ ಕೇಳ್ವರಿಗೆಲ್ಲ |
ಕರುಣದಿಂ ಇಷ್ಟಾರ್ಥಮಂ ಪಾಲಿಸುವ ಕಣ್ವಪುರವಾಸ ಶ್ರೀಕೃಷ್ಣನು || 1 || 164 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ

**ಪ್ರಸಂಗ ಪ್ರತಿ ಆಧಾರ:** ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ ಪ್ರಕಟಿತ ಸಂಪುಟ ೪

**ಪ್ರಸಂಗ ಪ್ರತಿ ಕೊಟ್ಟವರು:** ಸುಬ್ರಮಣ್ಯ ಭಟ್ ಕಜೆ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಸುಬ್ರಮಣ್ಯ ಭಟ್ ಕಜೆ

**ಅಂತರಜಾಲ ಪ್ರತಿ ಬರವಣಿಗೆ:** ಅಶ್ವಿನಿ ಹೊದಲ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ವಿನ್ಯಾಸ:** ಅಶ್ವಿನಿ ಹೊದಲ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ